

ಪ್ರವಾಸ ನಮ್ಮನ್ನು ಹೊಸ ಮನುಷ್ಯರನ್ನಾಗಿಯೇ ಮಾಡಬಹುದು!

## ಮಳೆಗೊಂದು ವಿಂಡೋ ಸೀಟು!

ಕಾಡದಾರಿಯಲ್ಲಿ ಹಾವಿನಂತೆ ಉದ್ದಕ್ಕೆ ಹರಿದುಹೋಗುವ ರೈಲಿನಲ್ಲೋ, ಬಸ್ಸಿನಲ್ಲೋ, ಪಯಣ ಮಾಡುವಾಗ ಕಿಟಕಿ ಪಕ್ಕದ ಸೀಟಿನಲ್ಲಿ ಕೂತು ಹೊರಗಿನ ಮಳೆಯನ್ನು, ನಿಸರ್ಗವನ್ನು ನೋಡುವ ಆಹ್ಲಾದಕ ಅನುಭವ ಯಾರಿಗಿಷ್ಟವಿಲ್ಲ? ಕಿಟಕಿಯಿಂದ ಮಲ್ಲಿಗೆ ಹೂವುಗಳಂತೆ ಉದುರುವ ಮಳೆ ಹನಿಗಳಿಗೆ ಹಾಗೆ ಕಿಟಕಿಯಿಂದ ಬೊಗಸೆಯೊಡ್ಡಿದರೆ, ಆಹಾ ಬೊಗಸೆಗೆ ಬೀಳುವ ಹನಿಗಳ ಆ ತಂಪಿಗೆ ಮೈಮನಸ್ಸು ನಲಿವಿನ ನವಿಲಾದಂತೆ. ಆ ಮಳೆಯ ಹನಿಗಳನ್ನು ನೋಡುತ್ತ ಕೂತುಬಿಟ್ಟರೆ ಕಿಟಕಿಯಿಂದ ಸರಿದು ಹೋಗುವ ಒಂದೊಂದು ಊರುಗಳ ದಾರಿಯೂ ನಮ್ಮೊಳಗೆ ಹೊಸತಾದ ಕಂಪನಗಳನ್ನೆಬ್ಬಿಸುತ್ತದೆ. ಇಂತಹ ಪಯಣವೊಂದು ನಮ್ಮೊಳಗೆ ಬೇರೆಯದ್ದೇ ಆದ ಲವಲವಿಕೆ ತುಂಬುತ್ತದೆ. ಅದೇ ಮಳೆ ಹನಿಗಳ ಹಿನ್ನೆಲೆಯಲ್ಲಿ ಎಷ್ಟೋ ಸಂಗತಿಗಳು ನಮ್ಮನ್ನು ಕಾಡಬಹುದು, ನಮ್ಮೊಳಗೊಂದು ಈವರೆಗೂ ಮೂಡಿರದ ಹಾಡೊಂದನ್ನು ಹಾಡಬಹುದು. ವಿಂಡೋ ಸೀಟಿಗೂ, ಮಳೆಗೂ, ಪಯಣಕ್ಕೂ ಇರುವ ಮಧುರಬಂಧವೇ ಹಾಗೆ. ನಮ್ಮ ಪ್ರವಾಸವನ್ನು ಎದೆಯ ಚಿಪ್ಪಲ್ಲಿ ಜತನವಾಗಿರಿಸುವ ಈ ವಿಂಡೋ ಸೀಟು ಒಂದು ಭಾವನಾತ್ಮಕ ಜೊತೆಗಾರ ಕೂಡ ಹೌದು. ಮಳೆ ಮತ್ತು ವಿಂಡೋ ಸೀಟು ಮೂಡಿಸುವ ಕಚಗುಳಿಯ ಭಾವಗಳನ್ನು ಅನುಭವಿಸಿದವರಿಗೇ ಗೊತ್ತು ಅದರ ನಾವೀನ್ಯತೆ.

## ಪಚ್ಚೆಹಾದಿಯ ನಡುವೆ ಚುಂಬಕ ಪಯಣ

ನೋಡಿದಷ್ಟೂ ಬೆಳೆಯುವ ಪಚ್ಚೆಹಾದಿ, ದೂರದಲ್ಲಿ ಸ್ವರ್ಗದಂತೆ ನಿಂತಿರುವ ಬೆಟ್ಟದ ಸಾಲುಗಳು, ಅಲ್ಲೆಲ್ಲೋ ಎದೆಗೆ ಝಲ್ಲನೇ ಹೂವಿನ ಬಾಣ ಬಿಡುವ ಜಲಲಧಾರೆಗಳು, ಹಸಿರು ಹೊದ್ದು ಮಳೆಗೆ ನೆನೆಯುತ್ತಾ ನಿಂತಿರುವ ಐತಿಹಾಸಿಕ ಕೋಟೆ, ಕಲ್ಲು ಬಸದಿಗಳು, ಇವನ್ನೆಲ್ಲಾ ಈ ಮಳೆಗಾಲದಲ್ಲಿಯೇ ಕಣ್ತುಂಬಿಕೊಳ್ಳಬೇಕು; ಎದೆಯ ಕ್ಯಾಮೆರಾದಲ್ಲಿ ಸೆರೆಯಾಗಿಸಬೇಕು; ಇಷ್ಟಪಟ್ಟವರ ಜೊತೆಗೆ ಒಂದಷ್ಟು ಹೊತ್ತು ಇಂತಹ ಹಸುರು ತುಂಬಿದ ಜಾಗದಲ್ಲಿ ಜಿಟಿಜಿಟಿ ಸುರಿವ ಮಳೆಯ ಜೊತೆ ಎದೆಯಾಳದ ಪಿಸುಮಾತುಗಳನ್ನಾಡಬೇಕು.

**ಒಂದಷ್ಟು ಚೆಂದದ ನೆನಪುಗಳನ್ನು ಪ್ರವಾಸದ ಮೂಲಕ ದಾಖಲಿಸಲು ಹೊರಡುವ ಮುನ್ನ, ನಮ್ಮ ಜೊತೆಗೆ ಪ್ರವಾಸಕ್ಕೆ ಬರುವವರಾರು? ನಮ್ಮ ಭವಿಷ್ಯದಲ್ಲಿ ನಮ್ಮ ಪ್ರವಾಸದ ನೆನಪಿನ ಭಾಗವಾಗಬೇಕಾದವರು ಯಾರು? ಎಂದು ಯೋಚಿಸುವುದು ಕೂಡ ತುಂಬಾ ಮುಖ್ಯ.**

ಹಸುರಿಗೆ ನಮ್ಮನ್ನು ಗೆಲುವಾಗಿಸುವ, ಬಾಡಿದ ಕಣ್ಣುಗಳಲ್ಲಿ ಹಚ್ಚಹಸುರಿನ ಬೆಳಕು ಮೂಡಿಸುವ ಶಕ್ತಿ ಇದೆ. ಮಲೆನಾಡಿನ ಚಿಕ್ಕಮಗಳೂರು, ಶಿವಮೊಗ್ಗ, ಕೊಡಗು, ಉತ್ತರಕನ್ನಡ, ಹಾಸನ, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹಾದು ಹೋಗುವ ಪಶ್ಚಿಮಘಟ್ಟದ ಸಾಲು ನಮಗೆ ಕಾಣುವ ಪ್ರತ್ಯಕ್ಷ ದೇವತೆ. ಒಂದಷ್ಟು ಹೊತ್ತು ಈ ದೇವತೆಯ ಚೆಂದವನ್ನು ದೂರದಿಂದ ನೋಡಿ ಆಸ್ವಾದಿಸಿದರೂ ಅದು ಬದುಕಿಗೆ ಕೊಡುವ ಚೇತೋಹಾರಿ ಅನುಭವ, ಜೀವನಪ್ರೀತಿ, ನೆಮ್ಮದಿ ಅಮೂಲ್ಯವಾದುದು.

ಪಶ್ಚಿಮಘಟ್ಟಗಳ ಸೌಂದರ್ಯ ನೂರ್ಮಡಿಗೊಳ್ಳುವ ಮಳೆಗಾಲದ ಈ ಹೊತ್ತಿನಲ್ಲಿ ಒಂದೊಂದು ಊರಿಗೂ ಒಂದೊಂದು ಚೆಲುವು. ಒಂದೊಂದು ದಾರಿಯೂ ಮಾಯಕದ ನಾಕದಂತೆ ಕಾಣಿಸುತ್ತದೆ. ಇದೇ ಪಶ್ಚಿಮಘಟ್ಟದಲ್ಲಿ ಹುಟ್ಟಿ ನೀಳವಾಗಿ ಹರಿಯುತ್ತ ನಮ್ಮ ಬದುಕಿಗೆ ಜೀವದಾಯಿನಿಯಾಗುವ ನದಿಗಳನ್ನು ನೋಡಲು ಈ ಮಳೆಗಾಲದಲ್ಲೊಮ್ಮೆ ಸುತ್ತಾಟ ಮಾಡಿದರೆ, ಇಂತಹ ನೀರಿನ ಮೂಲಗಳನ್ನು ಕಣ್ತುಂಬಿಕೊಂಡರೆ, ನಮ್ಮ ಸುತ್ತಲಿನ ಲೋಕದಲ್ಲಿ ಅದೆಷ್ಟು ಚೆಲುವು ತುಂಬಿಕೊಂಡಿದೆಯಪ್ಪಾ ಅನ್ನೋ ಹೆಮ್ಮೆ ಆವರಿಸುತ್ತದೆ. ಆದರೆ ಇಂತಹ ವಿಶೇಷತಾಣಗಳಿಗೆ ಪ್ರವಾಸ ಮಾಡುವ ಯೋಚನೆ ಇದ್ದರೆ ಪ್ರಕೃತಿಯ ಬೆಡಗು ಬಿನ್ನಾಣಗಳನ್ನು, ಸೂಕ್ಷ್ಮಗಳನ್ನು, ನೆಲ,